ಸೇವೆ ಸಲ್ಲಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ನೌಕರರ ಮೀಸಲಾತಿ ಬಗೆಗಿನ ಎಂಟನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇದ್ದೇನೆ.

ಅಧ್ಯಕ್ಷರು :- ವರದಿಯನ್ನು ಒಪ್ಪಿಸಲಾಯಿತು.

5) ಅಧ್ಯಕ್ಷರು ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ವಿಷಯಗಳು :- ಮೈಸೂರಿನ ಡಿ. ಬನುಮಯ್ಯ ಸಂಜೆ ಕಾಲೇಜನ್ನು ಅನುದಾನ ಸಂಹಿತೆಗೆ ಒಳಪಡಿಸುವುದು.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿರತಕ್ಕಂಥ ಡಿ. ಬನುಮಯ್ಯ ಸಂಜೆ ಕಾಲೇಜನ್ನು ಅನುದಾನ ಸಂಹಿತೆಗೆ ಒಳಪಡಿಸಬೇಕೆಂದು ಹೇಳಿ, ನಾನು ಅನೇಕ ಬಾರಿ ಅಂದರೆ ಸುಮಾರು 20 ವರ್ಷಗಳಿಂದ ವಿಧಾನ ಸಭೆಯಲ್ಲಿ ಪ್ರಸ್ತಾವ ಮಾಡಿಕೊಂಡು ಬಂದಿದ್ದೇನೆ. ಈ ಸಂಜೆ ಕಾಲೇಜು ಇಡೀ ರಾಜ್ಯದಲ್ಲಿ ಅತ್ಯಂತ ಹಿರಿಯದಾದಂಥ ಕಾಲೇಜು; ಪ್ರತಿಷ್ಠೆಯ ಕಾಲೇಜು ಎಂದು ಹೇಳಿದರೆ ತಪ್ಪಾಗಲಾರದು. ಇದೇ ಮಾದರಿಯಲ್ಲಿ ಸುಮಾರು 14 ಕಾಲೇಜುಗಳು ಈ ರಾಜ್ಯದಲ್ಲಿ ಇವೆ. ಈ ಒಂದು ಕಾಲೇಜನ್ನು ಬಿಟ್ಟು ಉಳಿದ ಎಲ್ಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಬೇಕೆನ್ನುವ ತೀರ್ಮಾನವನ್ನು ಮೊನ್ನೆ ತಾನೇ ಈ ಸರ್ಕಾರ ಮಾಡಿದೆ. ಆ ಸಂದರ್ಭದಲ್ಲಿ, ಮೊನ್ನೆ ಇದನ್ನು 351ರ ಅಡಿಯಲ್ಲಿ ಪ್ರಸ್ತಾಪ ಮಾಡಿದ್ದು ಅದಕ್ಕೆ ಕೊಟ್ಟ ಉತ್ತರವನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ಈ ಸದರಿ ಕಾಲೇಜನ್ನು ವೇತನ ಅನುದಾನಕ್ಕೆ ಒಳಪಡಿಸುವ ಪ್ರಸ್ತಾಪನೆ ಬಗ್ಗೆ ತ್ವರಿತವಾದ ನಿರ್ಣಯವನ್ನು ಕೈಗೊಂಡು ವೇತನ ಅನುದಾನದ ವ್ಯಾಪ್ತಿಗೆ ಒಳಪಡಿಸುತ್ತೇವೆ ಎನ್ನುವ ಉತ್ತರವನ್ನು ಕೊಟ್ಟ ಸಚಿವರಿಂದ ಕೇಲವೇ ದಿವಸಗಳಲ್ಲಿ ಒಂದು ಹಿಂಬರಹ ಬರುತ್ತದೆ. ನೀವು ಕೇಳಿದ್ದನ್ನು ಅನುಮೋದನೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳಬೇಕಾದರೆ ನಾನು ಇವತ್ತು ಕೇಳಬೇಕಾಗುತ್ತದೆ. ಈ 14 ಕಾಲೇಜುಗಳಿಗೆ ನೀವು ಅನುದಾನವನ್ನು ಕೊಡುತ್ತೀರಿ ಅದಕ್ಕೆ ಯಾವ ರೀತಿಯ ನೀತಿ ಸಂಹಿತೆಯನ್ನು ನೀವು ಅನುಸರಿಸಿಕೊಂಡು ಬಂದಿದ್ದೀರಿ. ಈ ಕಾಲೇಜಿಗೆ ಅನುದಾನ ಕೊಡುವ ವಿಚಾರದಲ್ಲಿ ಏನು ಅನುಸರಿಸಿಕೊಂಡು ಬಂದಿದ್ದೀರಿ. ಈ ಕಾಲೇಜಿಗೆ ಅನುದಾನ ಕೊಡುವುದರಲ್ಲಿ ಏನು ತೊಂದರೆಗಳು ಇವೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಚಿವರು ಈಗತಾನೇ ಬಂದರು. ಅಧ್ಯಕ್ಷರೆ ಅವರ ಗಮನವನ್ನು ನಾನು ಸೆಳೆಯುತ್ತೇನೆ, ನಾನು ಶೂನ್ಯ ವೇಳೆಯಲ್ಲಿ ಕೊಟ್ಟಂಥ ಪ್ರಶ್ನೆಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ದಯಮಾಡಿ ನನಗೆ ಇದು ಏತಕ್ಕೆ ಈ ತರಹ: ತಾರತಮ್ಯವಾಗಿದೆ ಎಂದು ತಾವು ವಿವರಿಸಿ ಹೇಳಬೇಕು. ಕಳೆದ 32 ವರ್ಷಗಳಿಂದ ಯಾವುದೇ ವೇತನ ಇಲ್ಲದ ಅನೇಕ ಜನ ಶಿಕ್ಷಕರು ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ದಯಮಾಡಿ ಬೇರೆ 14 ಕಾಲೇಜುಗಳನ್ನು ಯಾವ ರೀತಿ ಅನುದಾನಕ್ಕೆ ಒಳಪಡಿಸಿದ್ದಾರೆ ಆ ರೀತಿಯಲ್ಲಿ ಇದನ್ನು ಮಾಡಬೇಕೆನ್ನುವ ಒತ್ತಾಯವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಶ್ರೀ ಹೆಚ್. ಜಿ ಗೋವಿಂದೇಗೌಡ :- ಮಾನ್ಯ ಅಧ್ಯಕ್ಷರೇ, ವಿಶ್ವವಿದ್ಯಾಲಯ ಧನಸಹಾಯ ಅಂದರೆ ಯುಜಿಸಿ ಮಾರ್ಗಸೂಚಿಯನ್ವಯ ಪ್ರತಿಯೊಬ್ಬ ಅಧ್ಯಾಪಕರು ವಾರಕ್ಕೆ ಕನಿಷ್ಟ ಪಕ್ಷ 40 ಗಂಟೆಗಳ ಕಾರ್ಯಭಾರವನ್ನು ನಿರ್ವಹಿಸಬೇಕೆಂಬ ನಿಯಮ ಇರುತ್ತದೆ. ಈಗಾಗಲೇ ನಮ್ಮ ಅನುಭವಕ್ಕೆ ಬಂದಿರುವಂತೆ ಹಗಲು ಕಾಲೇಜುಗಳಲ್ಲಿಯೇ ಪ್ರತಿದಿನ ಸುಮಾರು ಏಳುವರೆ ಗಂಟೆ ಅವಧಿಯಂತೆ

ಕಾರ್ಯನಿರ್ವಹಿಸಬೇಕಾಗಿದ್ದು ನಿಯಮಗಳನ್ನು ಅನೇಕ ಕಾರಣಗಳಿಂದ ಅಳವಡಿಸಲಾಗಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಂಜೆ ಕಾಲೇಜುಗಳಲ್ಲಿ ಈ ನಿಯಮಗಳನ್ನು ಪರಿಪಾಲಿಸಲು ಸಾಧ್ಯವಾಗುವುದಿಲ್ಲ. ಸಂಜೆ ಕಾಲೇಜುಗಳಲ್ಲಿ ತರಗತಿಗಳು ಸಾಮಾನ್ಯವಾಗಿ 6 ರಿಂದ 8-30 ಅಥವಾ 9 ಗಂಟೆಗಳವರೆಗೆ ನಡೆಸುತ್ತಿದ್ದಾರೆ. ಇವರಿಂದ ಯಾವುದೇ ಸಂದರ್ಭದಲ್ಲಿ ವಾರಕ್ಕೆ 40 ಗಂಟೆಗಳ ಕಾರ್ಯಭಾರವನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಮೇಲಿನ ಕಾರಣಗಳಿಂದಾಗಿ ಈಗಾಗಲೇ ವೇತನಾನುಧಾನಕ್ಕೆ ಒಳಪಟ್ಟಿರುವ ಸಂಜೆ ಕಾಲೇಜುಗಳಿಗೆ ನೀಡುತ್ತಿರುವ ವೇತನಾನುಧಾನ ಸವಲತ್ತುಗಳನ್ನು ಹಿಂದೆಗೆದುಕೊಳ್ಳಲು ಪರಿಶೀಲಿಸಲಾಗುತ್ತಿದೆ. ಅಂಥಾದ್ದರಲ್ಲಿ ಹೊಸ ಸಂಜೆ ಕಾಲೇಜುಗಳನ್ನು ವೇತನಾಧಾನಕ್ಕೆ ಒಳಪಡಿಸಲು ಸಾಧ್ಯವಾಗುವುದಿಲ್ಲ. ಹಾಗೂ ಇಂತ ಪ್ರಸ್ತಾವನೆಗಳನ್ನು ಯುಜಿಸಿ ನಿಯಮಗಳ ಪ್ರಕಾರ ಕಾನೂನಿಗೆ ವಿರುದ್ಧವಾಗಿರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಅಧ್ಯಕ್ಷರೇ, ಇವರು ಕೊಡುತ್ತಾ ಇರತಕ್ಕಂಥ ಅನುದಾನವನ್ನು ಕೂಡ ವಾಪಸ್ ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆ ಮಾಡುತ್ತೇವೆ ಅಂದರೆ ಅದನ್ನೂ ನಿಲ್ಲಿಸಿ. ಪರಿಶೀಲನೆ ಮಾಡಬೇಕಾದರೆ ಎಲ್ಲವನ್ನೂ ಒಟ್ಟಿಗೆ ಮಾಡಿ.....

ಅಧ್ಯಕ್ಷರು:- ಜಯಚಂದ್ರರವರೇ, you can bring it by some other way. If you start from the first bench, it becomes a precedent. Kindly bring it in some other from. ದಯಮಾಡಿ ಸಹಕರಿಸಿ.

(ಆ) ಪುರಸಭೆಗಳ ಅಧ್ಯಕ್ಷರಿಗೆ ಅವಧಿ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಅಧ್ಯಕ್ಷರೇ, ಸ್ಥಳೀಯ ಸಂಸ್ಥೆಗಳ ಆಫೀಸ್ ಬೇರರ್ಸ್‌ನ್ನು ಚುನಾವಣೆ ಮಾಡತಕ್ಕಂಥ ಕಾಲದಲ್ಲಿ ಮೀಸಲಾತಿ ಪದ್ಧತಿಯನ್ನು ಅನುಕರಣೆ ಮಾಡಿದ್ದೇವೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯಗಳಲ್ಲಿ ಈ ನಿಯಮವನ್ನು ಮಾಡಿದ್ದೇವೆ. ಈ ರೀತಿಯಲ್ಲಿ ಪುರಸಭೆಗಳಲ್ಲಿಯೂ ಮಾಡಿದಾಗ ಬಹುಶಃ ಅವರಿಗೂ ಅವಧಿಯನ್ನು ನಿಗಧಿ ಮಾಡುತ್ತಾರೆ ಎಂದು ನಾವು ಭಾವಿಸಿದ್ದೆವು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳಲ್ಲಿ 20 ತಿಂಗಳು ಮತ್ತು ಮೇಯರ್‌ಗಳಿಗೆ ಒಂದು ವರ್ಷ ಎಂದು ಅವಧಿ ನಿಗಧಿ ಆಗಿದೆ. ಆದರೆ ಇಲ್ಲಿಯವರೆಗೆ ಪುರಸಭಾಧ್ಯಕ್ಷರಿಗೆ ಅವಧಿಯನ್ನು ನಿಗದಿ ಮಾಡಿದ್ದಾರೋ ಇಲ್ಲವೋ ಎಂಬ ಬಗ್ಗೆ ಪ್ರಕಟಣೆಯೂ ಆಗಿಲ್ಲ. ಪುರಸಭಾ ಅಧ್ಯಕ್ಷರುಗಳೂ ಕೂಡ ಮೀಸಲಾತಿ ಪ್ರಕಾರವೇ ಅಧ್ಯಕ್ಷರಾಗಿರುವುದರಿಂದ ಬೇರೆ ಸಮೂಹಗಳಿಗೂ ಕೂಡ ಅವಕಾಶವನ್ನು ತಾವುಗಳು ಕೊಡಲಿಚ್ಚಿಸುತ್ತೀರಾ ಎಂಬುದನ್ನು ಕೇಳಿ ಬಯಸುತ್ತೇನೆ. ಹಾಗೂ ಅವಧಿ ನಿಗಧಿಪಡಿಸುವುದಿಲ್ಲವಾದಲ್ಲಿ ಅವರೇ ಮುಂದುವರಿದುಕೊಂಡುಹೋಗ ಬಹುದೇ ಎಂಬ ಬಗ್ಗೆ ಒಂದು ನಿರ್ದಿಷ್ಟ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸಭಾದ್ಯಕ್ಷರೇ, ಮೀಸಲಾತಿಗೆ ಸಂಬಂಧಪಟ್ಟ ಹಾಗೆ ನಾವು ಕಾನೂನಿನ ಅಡಿಯಲ್ಲಿ ಇದನ್ನು ಕಮಿಷನರ್‌ರವರಿಗೆ ವಹಿಸಿದ್ದೇವೆ. ಈ ಪ್ರಕ್ರಿಯೆಯನ್ನು ಬಹುಶ: ಅವರು ಶುರು ಮಾಡಬೇಕಾಗುತ್ತದೆ.